ನನ್ನ ಮಗಳ ಜೊತೆ ಆಗಸ್ಟ್ ಹಿರ್ಟ್ ಪ್ರಾಧ್ಯಾಪಕನಾಗಿದ್ದ ವಿದ್ಯಾಲಯಕ್ಕೆ ಭೇಟಿ ಕೊಟ್ಟು ಅಲ್ಲಿನ ಪ್ರಯೋಗಾಲಯ ಮತ್ತು ಹಲವು ವಿವರಗಳನ್ನು ಕಲೆಹಾಕಿದ್ದಾರೆ. ಅವರ ಇ–ಮೇಲ್ ಪತ್ರವನ್ನು ತಮಗಾಗಿ ಕಳುಹಿಸುತ್ತಿದ್ದೇನೆ. ಜೊತೆಗೆ ನನ್ನಲ್ಲಿರುವ ಹಲವು ಪ್ರಶ್ನೆಗಳನ್ನೂ ವಿಶೇಷವಾಗಿ ನಿಮ್ಮೊಂದಿಗೆ ಹಂಚಿಕೊಳ್ಳುವ ಸಲುವಾಗಿ ವಿವರವಾಗಿ ಒಂದು ಇ–ಮೇಲ್‌ನಲ್ಲಿ ಬರೆದು ಇದರೊಂದಿಗೆ ಲಗತ್ತಿಸಿದ್ದೇನೆ. ತಾವು ನನ್ನ ಪ್ರಶ್ನೆಗಳಿಗೆ ಉತ್ತರಿಸಿ, ಚರಿತ್ರೆಯ ಕೆಲವು ಪ್ರಮುಖ ಘಟನೆಗಳ ಬಗ್ಗೆ ನನಗಿರುವ ಅನುಮಾನಗಳನ್ನು ಪರಿಹರಿಸುತ್ತೀರೆಂದು ನಂಬುತ್ತೇನೆ.

ಇಂತೀ ನಿಮ್ಮ

★★★

ದಿಂಗ್ಸೆ ಅವರಿಂದ ಉತ್ತರ ಬರುವುದರ ಬಗ್ಗೆ ನನಗೆ ಯಾವುದೇ ಭರವಸೆಯಾಗಲಿ ಖಾತ್ರಿಯಾಗಲಿ ಇರಲಿಲ್ಲವಾದರೂ, ಅವರಲ್ಲಿ ನಾನು ಕಂಡ ಧನಾತ್ಮಕ ಮನೋಭಾವ ಹಾಗೂ ಬೌದ್ಧಿಕ ಚಿಂತನೆಗಳಿಂದಾಗಿ ಆಶಾದಾಯಕವಾಗಿಯೆ ಇದ್ದೆ. ಅದರಂತೆ ಹತ್ತು ದಿನಗಳ ನಂತರ ನನಗೊಂದು ದೀರ್ಘವಾದ ಇ–ಮೇಲ್ ಬಂತು. ಆತುರಾತುರವಾಗಿ ಓದತೊಡಗಿದೆ.

'ಪ್ರೀತಿಯ ಪ್ರೊಫೆಸರ್,

ನೀವು ಭಾರತದ ದಕ್ಷಿಣದ ತುದಿಯಿಂದ ಕಾಶ್ಮೀರದ ಒಂದು ನಿರ್ಜನ ಕಣಿವೆಗೆ ಬಂದು ಇಲ್ಲಿನ ಹಲವು ವಿವರಗಳ ಬಗ್ಗೆ ಉತ್ಸುಕತೆ ತೋರಿ, ಹಲವು ಪ್ರಶ್ನೆಗಳನ್ನು ನನ್ನೊಂದಿಗೆ ಚರ್ಚಿಸಿದರೂ ನಾನು ಎಲ್ಲ ವಿವರಗಳನ್ನು ನೀಡಲು ಹಿಂಜರಿದೆ ನಿಜ. ಅದಕ್ಕೆ ಕಾರಣ ವೈಯುಕ್ತಿಕ ಜೀವನದಲ್ಲಿ ನಾನು ಅನುಭವಿಸಿದ ಬೇಸರ. ಆದರೆ ಇಲ್ಲಿಂದ ಹೋದ ಮೇಲೂ ನಾವು ಚರ್ಚಿಸಿದ ಹಲವಾರು ವಿವರಗಳ ಬಗ್ಗೆ ನೀವು ತೋರಿರುವ ಕಾಳಜಿಯನ್ನು ಕಂಡು ನಿಮ್ಮ ಆಸಕ್ತಿಯ ಬಗ್ಗೆ ನನ್ನಲ್ಲಿ ಗೌರವ ಬೆಳೆದಿದೆ. ನಿಮ್ಮ ಕುತೂಹಲಕ್ಕೆ ಮನಸೋತಿದ್ದೇನೆ. ಹಾಗೆಂದೆ ನಿಮ್ಮೊಂದಿಗೆ ಇಲ್ಲಿ ಬಂದಾಗ ಕೆಲವು ವಿವರಗಳನ್ನು ಹಂಚಿಕೊಳ್ಳಲಾಗದುದಕ್ಕೆ ವ್ಯಥೆ ಪಡುತ್ತಿದ್ದೇನೆ. ಒಂದಂತು ಸತ್ಯ. ನೀವು ಇಲ್ಲಿದ್ದಾಗ ನಿಮ್ಮೊಂದಿಗೆ ಜೀವನದ ವಿವರಗಳನ್ನು ಹಂಚಿಕೊಳ್ಳುವ ಮನಸ್ಸಿದ್ದರೂ ಬಹುಶಃ ಮಾನವ ಸ್ವಾಭಾವಿಕ ಬಿಗುಮಾನ ಮತ್ತು ನಾಚಿಕೆ ನನ್ನನ್ನು ಕಟ್ಟಿಹಾಕಿತ್ತು. ಆದರೆ ಇ–ಅಂಚೆಯ ಮೂಲಕ ಅಂತಹ ನಿರ್ಬಂಧದಿಂದ ಅಲ್ಪಸ್ವಲ್ಪ ಸ್ವಾತಂತ್ರ್ಯ ಸಿಗುವುದರಿಂದ ಮುಕ್ತವಾಗಿ ಹೇಳಲು ಸಾಧ್ಯವಾಗುತ್ತಿದೆ. ಹಾಗೆಂದೆ ಮನಬಿಚ್ಚಿ ಬರೆಯಲು ಪ್ರಯತ್ನಿಸಿದ್ದೇನೆ.

ಇನ್ನು ನಿಮ್ಮೆಲ್ಲ ಪ್ರಶ್ನೆಗಳಿಗೆ ಸಂಕ್ಷಿಪ್ತ, ನೇರ ಹಾಗೂ ಒಂದು ಸರಳವಾದ ಉತ್ತರ ಎಂದರೆ ನಾನು ಹಿಮ್ಲರ್‌ನ ಆರ್ಯವಾಂಛೆಯ ಫಲ!

ಗಾಬರಿಯಾಯಿತೆ?

ಇದೆಲ್ಲದರ ಅರಿವಾಗತೊಡಗಿದ್ದು ಇತ್ತೀಚೆಗೆ. ಅದರೆ ಪ್ರಾರಂಭವಾದದ್ದು ನಾನು ಹತ್ತು ವರ್ಷದವನಿದ್ದಾಗ.

ನಾನು ದಾಹ್ ಹಳ್ಳಿಯವ. ಅಥವಾ ಹಾಗೆ ಅಂದುಕೊಂಡಿದ್ದೆ. ಕಾರಣ ನನ್ನ ಪೂರ್ವೇತಿಹಾಸ ತಿಳಿದುಕೊಳ್ಳುವ ಮುನ್ನವೇ ಅನಾಥನಾಗಿದ್ದೆ. ಸುಮಾರು ಒಂಬತ್ತು ವರ್ಷದವನಿದ್ದಾಗಲೆ ನನ್ನ ತಂದೆ ಮತ್ತು ತಾಯಿಯನ್ನು ಕಳೆದುಕೊಂಡೆ. ಆ ದಿನ ನನ್ನ ತಂದೆ ಮತ್ತು ತಾಯಿ ಇಬ್ಬರೂ ಬೆಟ್ಟದ ತಪ್ಪಲಿನ ತೋಟದಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾಗ ಭಾರೀ ಭೂಕಂಪವಾಗಿ, ಇಲ್ಲಿನ ಭೂಮಿ ಜೋರಾಗಿ ನಡುಗಿತ್ತು. ಅವರಿದ್ದ ಬೆಟ್ಟದಲ್ಲಿ ದೊಡ್ಡ ಭೂಪಾತವಾಗಿ, ಬೆಟ್ಟದ ಒಂದು ಭುಜವೇ ಕೆಳಗೆ ಕುಸಿದು, ಮಣ್ಣು ಮತ್ತು ಕಲ್ಲಿನ ರಾಶಿಯಲ್ಲಿ